ಕರೆ ಬಂದಿತು'ಸುಬೇದಾರ ಹಜಾರಸಿಂಹ.'

'ಯಾರು? ಲಪಟನ ಸಾಹೇಬರೆ! ಹುಕುಮ ಹುಜೂರ.' ಹೀಗೆ ಹೇಳಿ ಸುಬೇದಾರ ಸೆಟೆದು ನಿಂತು ಸೈನಿಕ ಸಲಾಮ ನೀಡಿ ಎದುರಿಗೆ ಹೋದನು.

'ನೋಡು, ಈಗಿಂದೀಗಲೆ ದಾಳಿ ಮಾಡಬೇಕು. ಮೈಲು ದೂರದಲ್ಲಿ ಪೂರ್ವದ ಮೂಲೆಯಲ್ಲಿ ಒಂದು ಜರ್ಮನಿಯರ ಕಣಿವೆಯಿದೆ. ಅದರಲ್ಲಿ ಐವತ್ತಕ್ಕಿಂತ ಹೆಚ್ಚು ಜರ್ಮನಿಯರಿಲ್ಲ. ಈ ಮರಗಳ ಕೆಳ ಕೆಳಗೆ ಎರಡು ಗದ್ದೆಯಲ್ಲಿ ಹಾದು ಹೋಗುವ ತಿರುವುಗಳುಳ್ಳ ರಸ್ತೆಯಿದೆ. ಮೂರು ನಾಲ್ಕು ತಿರುವುಗಳಿವೆ. ಎಲ್ಲಿ ತಿರುವು ಇದೆಯೊ ಅಲ್ಲಿ ಹದಿನೈದು ಸೈನಿಕರನ್ನು ನಿಲ್ಲಿಸಿ ಬಂದಿದ್ದೇನೆ. ನೀನು ಇಲ್ಲಿ ಹತ್ತು ಜನರನ್ನು ಬಿಟ್ಟು ಉಳಿದೆಲ್ಲರನ್ನು ಜೊತೆಗೆ ಕರೆದುಕೊಂಡು ಹೋಗಿ ಅವರೊಂದಿಗೆ ಸೇರು. ಕಣಿವೆ ಹತ್ತಿರ ಅಲ್ಲಿಯೇ, ಎರಡನೇ ಹುಕುಮ ಸಿಗುವವರೆಗೆ ಧೈರ್ಯವಾಗಿ ನಿಂತುಕೊಂಡಿರು. ನಾವು ಇಲ್ಲಿ ಇರುವೆವು.'

'ತಮ್ಮ ಆದೇಶದಂತೆ.' ಸದ್ದಿಲ್ಲದಂತೆ ಎಲ್ಲರೂ ಸಿದ್ಧರಾದರು. ಬೋಧಾನೂ ಸಹ ಕಂಬಳಿ ತೆಗೆದು ಹೊರಡಲನುವಾದ. ಆಗ ಲಹನಾಸಿಂಹನು ತಡೆದನು. ಲಹನಾಸಿಂಹ ಮುಂದಾದಾಗ ಬೋಧಾನ ತಂದೆ ಸುಬೇದಾರನು ಬೆರಳಿನಿಂದ ಬೋಧಾನಿಗೆ ಸನ್ನೆ ಮಾಡಿದನು.ಲಹನಾಸಿಂಹಅದನ್ನರಿತುಸುಮ್ಮನಾದನು. ಹಿಂದೆ ಹತ್ತು ಜನ ಯಾರುಳಿಯಬೇಕೆಂದು ತುಂಬಾ ವಾದ-ವಿವಾದವಾಯಿತು. ಯಾರೂ ಉಳಿಯಲು ಇಚ್ಛಿಸುತ್ತಿರಲಿಲ್ಲ. ಎಲ್ಲರಿಗೆ ತಿಳಿಹೇಳಿ ಸುಬೇದಾರನು ಮಾರ್ಚ್ ಮಾಡಿದನು. ಲಪಟನ ಸಾಹೇಬರು ಲಹನಾನ ಅಗ್ಗಿಷ್ಟಿಕೆಯ ಹತ್ತಿರ ಮುಖ ತಿರುಗಿಸಿಕೊಂಡು ನಿಂತುಕೊಂಡರು ಮತ್ತು ಜೇಬಿನಿಂದ ಸಿಗರೇಟ್ ತೆಗೆದು ಹೊತ್ತಿಸತೊಡಗಿದರು. ಹತ್ತು ನಿಮಿಷದ ನಂತರ ಅವರು ಲಹನಾನತ್ತ ಕೈಚಾಚಿ ಹೇಳಿದರು.

'ತೆಗೆದುಕೊ ನೀನೂ ಸೇದು.' ಕಣ್ಣು ಮಿಟುಕಿಸುವಷ್ಟರಲ್ಲಿ ಲಹನಾಸಿಂಹನಿಗೆ ಎಲ್ಲವೂ ಗೊತ್ತಾಯಿತು. ಮುಖದ ಭಾವವನ್ನು ಮರೆಮಾಚಿಸಿ ಹೇಳಿದ, 'ಕೊಡಿ ಸಾಹೇಬರೆ.' ಕೈಚಾಚುತ್ತಲೆ ಅಗ್ಗಿಷ್ಟಿಕೆಯ ಬೆಳಕಿನಲ್ಲಿ ಸಾಹೇಬರ ಮುಖ ನೋಡಿದನು. ಕೇಶ ನೋಡಿದನು. ಆಗ ಅವನಿಗೆ ಅಪಾಯದ ಆಶಂಕೆಯವಾಯಿತು. ಲಪಟನ ಸಾಹೇಬರ ಪಟ್ಟಿ ಪಟ್ಟಿ ಕೇಶ ವಿನ್ಯಾಸ ಒಂದೇ ದಿನದಲ್ಲಿ ಎಲ್ಲಿ ಹಾರಿಹೋಯಿತು ಮತ್ತು ಅದರ ಜಾಗದಲ್ಲಿ ಕೈದಿಗಳಂತೆ ಕತ್ತರಿಸಿದ ಕೇಶ ವಿನ್ಯಾಸ ಎಲ್ಲಿಂದ ಬಂದಿತು?

ಬಹುಶಃ ಸಾಹೇಬರು ಶರಾಬು ಕುಡಿದಿದ್ದಾರೆ ಮತ್ತು ಅವರಿಗೆ ತಮ್ಮ ಕೇಶರಾಶಿಯನ್ನು ಕತ್ತರಿಸುವ ಅವಕಾಶ ಸಿಕ್ಕಿದೆ. ಲಹನಾಸಿಂಹ ಪರೀಕ್ಷಿಸ ಬಯಸಿದನು. ಲಪಟನ ಸಾಹೇಬರು ಐದು ವರ್ಷಗಳಿಂದ ಅವನ ರೆಜಿಮೆಂಟಿನಲ್ಲಿದ್ದರು. 'ಸಾಹೇಬರೆ, ನಾವು ಯಾವಾಗ ಹಿಂದುಸ್ತಾನಕ್ಕೆ ಹೋಗುವೆವು?' 'ಯುದ್ಧ ಮುಗಿದ ನಂತರ. ಏಕೆ, ಈ ದೇಶ ಇಷ್ಟ ಇಲ್ಲವೆ?'

'ಹಾಗಲ್ಲ ಸಾಹೇಬರೆ, ಬೇಟೆಯ ಆ ಮಜಾ ಇಲ್ಲಿ ಎಲ್ಲಿ ಸಾಧ್ಯ? ಗತವರ್ಷ ನಕಲಿ ಯುದ್ಧದ ನಂತರ ನಾವು ನೀವು ಜಗಾಧಾರಿ ಜಿಲ್ಲೆಯಲ್ಲಿ ಬೇಟೆಯಾಡಲು ಹೋಗಿದ್ದೆವು-ಹೌದು, ಹೌದು-ಅಲ್ಲಿಯೆ ತಾವು ಕತ್ತೆ ಸವಾರಿ ಮಾಡಿದ್ದಿರಿ ಮತ್ತು ತಮ್ಮ ಅಡುಗೆಯವ ಅಬ್ದುಲ್ಲಾ ರಸ್ತೆಯಲ್ಲಿಯ ಒಂದು ಮಂದಿರದಲ್ಲಿ ಜಲತರ್ಪಣ ಮಾಡಲು ಉಳಿದುಕೊಂಡಿದ್ದನಲ್ಲವೆ? ನಿಸ್ಸಂದೇಹವಾಗಿ ಪೆದ್ದು ಆತ-ಎದುರಿನಿಂದ ಒಂದು ನೀಲಹಸು ಹೋಯಿತು, ಅಂಥ ಅತಿ ದೊಡ್ಡ ಹಸುವನ್ನು ನಾನು ನೋಡಿಯೇ ಇರಲಿಲ್ಲ ಮತ್ತು ತಮ್ಮ ಒಂದು ಗುಂಡು ಅದರ ಹೆಗಲಿಗೆ ತಾಗಿ ನಿತಂಬದ ಮಾಂಸಲ ಭಾಗದಿಂದ ಹೊರಹೋಯಿತು. ಇಂಥ ಆಫೀಸರ ಜೊತೆ ಬೇಟೆಯಾಡುವುದಲ್ಲಿ ಮಜಾ ಬರುತ್ತೆ. ಯಾಕೆ ಸಾಹೇಬರೆ, ಆ ನೀಲಹಸುವಿನ ತಲೆ ಶಿಮ್ಲಾದಿಂದ ತಯಾರಾಗಿ ಬಂದಿತ್ತಲ್ಲವೆ? ರೆಜಿಮೆಂಟಿನ ಮೆಸ್‌ನಲ್ಲಿ ಅದನ್ನು ನೇತು ಹಾಕೋಣ ಎಂದು ತಾವು ಹೇಳಿದ್ದಿರಿ ಮತ್ತು ನಾನು ಅದನ್ನು ವಿಲಾಯತಗೆ ಕಳಿಸಿಬಿಟ್ಟೆ. ಎಷ್ಟು ದೊಡ್ಡ ದೊಡ್ಡ ಕೊಂಬುಗಳು. ಎರಡೆರೆಡು ಫೂಟು ಉದ್ದವಿರಬಹುದು.

'ಹೌದು, ಲಹನಾಸಿಂಹ, ಎರಡು ಫೂಟು ನಾಲ್ಕು ಇಂಚು ಉದ್ದವಿದ್ದವು. ನೀನು ಸಿಗರೇಟ್ ಸೇದಲಿಲ್ಲ?'

'ಸೇದುತ್ತೇನೆ ಸಾಹೇಬರೆ, ಕಡ್ಡಿಪೆಟ್ಟಿಗೆ ತೆಗೆದುಕೊಂಡು ಬರುವೆ.' ಎಂದು ಹೇಳಿ ಲಹನಾಸಿಂಹ ಕಣಿವೆಯಲ್ಲಿ ಇಳಿದನು. ಈಗ ಆತನಿಗೆ ಸಂದೇಹ ಉಳಿದಿರಲಿಲ್ಲ ಮತ್ತು ಏನು ಮಾಡಬೇಕೆಂದು ಆತನು ಕೂಡಲೇ ನಿಶ್ಚಿಯಿಸಿ ಬಿಟ್ಟಿದ್ದನು. ಕತ್ತಲಲ್ಲಿ ಮಲಗಿರುವವನಿಗೆ ಅವನು ಡಿಕ್ಕಿ ಹೊಡೆದನು. 'ಯಾರು? ವಜೀರಸಿಂಹನೆ?'